ಯನ್ನು ಮಾಡಲಾಗಿದೆ. ಈ ರಸ್ತೆಯು ಈಗ ಜಿಲ್ಲಾ ವ್ಯಾಪ್ತಿಗೆ ಬರುತ್ತಿದ್ದು ಇಲ್ಲಿಯವರೆಗೆ ಈ ರಸ್ತೆಯ ಡಾಂಬರೀಕರಣ ಆಗದಿರುವುದು ಜನರಲ್ಲಿ ಕುತೂಹಲ ಉಂಟು ಮಾಡಿದೆ. ಬರುವ ೨ ತಿಂಗಳೊಳಗಾಗಿ ಈ ರಸ್ತೆಯ ಡಾಂಬರೀಕರಣ ಮಾಡದೆ ಹೋದಲ್ಲಿ ಬರುವ ಮಳೆಗಾಲದಲ್ಲಿ ಈ ರಸ್ತೆಯು ಕೆಟ್ಟು ಹೋಗುತ್ತದೆ. ಇದೇ ರೀತಿ ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುವ ರಸ್ತೆಗಳ ಡಾಂಬರೀಕರಣಕ್ಕಾಗಿ ಕಳೆದ ವರ್ಷ ಆಯವ್ಯಯದಲ್ಲಿ ಬಂದಿರುವ ಹಣದ ಉಪಯೋಗವನ್ನು ಕೂಡಲೇ ಮಾಡುವುದು ಅತ್ಯವಶ್ಯವಿರುತ್ತದೆ. ವಂಣಗುತ್ತಿ ಹಾಗೂ ಬಾಡವಾಡಿ ರಸ್ತೆಯ ಡಾಂಬರೀಕರಣದ ಕೆಲಸವು ಪೂರ್ತಿ ಮಾಡುವುದು ಅತ್ಯವಶ್ಯವಿದ್ದು ಇದಕ್ಕಾಗಿ ಹಣಕಾಸಿನ ವ್ಯವಸ್ಥೆ ಮಾಡಿ ಕೂಡಲೇ ರಸ್ತೆ ಪೂರ್ತಿ ಮಾಡುವಂತೆ ಜನರ ಪರವಾಗಿ ಒತ್ತಾಯಿಸುತ್ತೇನೆ ಹಾಗೂ ಇದರ ಬಗ್ಗೆ ಸಂಬಂಧಪಟ್ಟ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡುವಂತೆ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ವೀಣಗುಂಗರಿಕೆ ಮಾಗೂ ಬಂದರು ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಆ ಸದನದಲ್ಲಿದ್ದಾರೆ. ದಕಆಕರಣ ಉತ್ತರವನ್ನು ಮಾನ್ಯ ಸದಸ್ಯರಿಗೆ ತರಿಸಿಕೊಡುತ್ತೇನೆಂದು ತಿಳಿಸಬಯಸುತ್ತೇನೆ.

೯ ಸುಳ್ಯ ತಾಲ್ಲೂಕಿನ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕಿನಿಂದ ಕೃಷಿ ಕಾರ್ಮಿಕರಿಗೆ ಹಾಗೂ ಪರಿಶಿಷ್ಟ ಜಾತಿಯವರಿಗೆ ಕಿರುಕುಳ ಕೊಡುತ್ತಿರುವುದು.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಕಳೆದ ೧೯೮೬-೮೪ ರಿಂದ ಸತತವಾಗಿ ೧೯೮೬-೮೮ ರವರೆಗೆ ಕೃಷಿ ಕಾರ್ಮಿಕರಿಗೆ ದುರ್ಬಲವರ್ಗದವರಿಗೆ ಪರಿಶಿಷ್ಟ ಜಾತಿ, ಪಂಗಡದವರಿಗೆ ಈ ಬ್ಯಾಂಕಿನಲ್ಲಿ ನೀಡಿದ ಸಾಲದ ಫಲಾನುಭವಿಗಳ ಅಂಕಿಅಂಶಗಳನ್ನು ತಿಳಿಯಬಯಸುತ್ತೇನೆ. ಈ ಬ್ಯಾಂಕಿನಲ್ಲಿ ಈ ಮೇಲೆ ಹೇಳಿದ ಕೆಲವು ಫಲಾನುಭವಿಗಳಿಂದ ಸದಸ್ಯತನ, ಜೀಸು, ಪಾಲು ಬಂಡವಾಳ ಹಣ ವಸೂಲಿ ಮಾಡಿದ್ದು, ಸದ್ರಿ ಫಲಾನುಭವಿಗಳನ್ನು ೨-೩ ವರ್ಷಗಳಿಂದ ಬ್ಯಾಂಕಿಗೆ ಅಲೆದಾಡಿಸಿ ಸತಾಯಿಸಿದರೂ ಈ ಸಾಲದ ಫಲಾನುಭವಿಗಳ ಸಾಲದ ಅರ್ಜಿಗಳನ್ನು ದಾಖಲು ಮಾಡದೆ, ಬ್ಯಾಂಕಿನ ಬಾಗಿಲಿನಿಂದಲೇ ವಾಪಸ್ ಕಳುಹಿಸಿದ್ದು ಈ ಬಗ್ಗೆ ಸಂಬಂಧಪಟ್ಟ ಸಹಕಾರಿ ಇಲಾಖೆಗೆ ದೂರು ಕೊಟ್ಟರೂ ಸಹ ಇಲಾಖೆಯವರು ಸಹ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಕಂಡುಬಂದಿರುತ್ತದೆ. ಈ ಬ್ಯಾಂಕಿನಲ್ಲಿ ಸಾಲ ಪಡೆದ ಫಲಾನುಭವಿಗಳಿಗೆ ಸಾಲ ಮಂಜೂರಾತಿ ಪತ್ರವನ್ನು ಕೊಡದೆ ಮೌಖಿಕವಾಗಿ ಸಾಲ ನೀಡಿದ್ದು, ಸಾಲ ಪಡೆದ ಫಲಾನುಭವಿಗಳಿಗೆ ಸಾಲ ಮಂಜೂರಾತಿ ಪತ್ರವನ್ನು ಕೊಡದೆ ಇರುವುದು ಕಂಡುಬಂದಿರುತ್ತದೆ. ಸಾಲ ಪಡೆದ ಫಲಾನುಭವಿಗಳಿಗೆ ಸಾಲ ಮಂಜೂರಾತಿ ಪತ್ರವನ್ನು ಕೊಡದೆ ಮೌಖಿಕವಾಗಿ ಸಾಲ ನೀಡಿದ್ದು,